# ಈ ವ್ಯಾಧಿಗೆ ಮದ್ದೆಲ್ಲಿದೆ?

ಸರಕಾರಗಳೇನೋ ಹಿರಿಯರ ನೆರವಿಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಆದರೆ ಸ್ವಂತ ಮನೆಯಲ್ಲೇ ಮಕ್ಕಳಿಂದ ಕಿರುಕುಳ, ನಿರ್ಲಕ್ಷ್ಯ, ಅವಮಾನಗಳು ನಡೆದರೆ ಸರ್ಕಾರಗಳಾದರೂ ಏನು ಮಾಡಲಾದೀತು? ಮಕ್ಕಳ ಮೇಲೆಯೇ ಪೊಲೀಸ್ ದೂರು ನೀಡಿ ಹಿರಿಯರು ಬದುಕು ಮುಂದುವರಿಸಲು ಸಾಧ್ಯವೆ? ವೃದ್ಧಾಪ್ಯದಲ್ಲಿ ಬೇಕಾದ ಪ್ರೀತಿ, ವಿಶ್ವಾಸಗಳನ್ನು ಹಣದಿಂದಲೇ ಅಳೆಯುವ ನಮ್ಮ ಧೋರಣೆ ಎಷ್ಟು ಸರಿ?



ಈಶ್ವರ್

ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ. ಸಣ್ಣ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅದೇ ವೇಳೆ ವೃದ್ಧಾಶ್ರಮಗಳ ಸಂಖ್ಯೆಯೂ ಏರುತ್ತಿದೆ. ಹೊಸ ಕಾಲದ ಕುಟುಂಬದ ಪರಿಕಲ್ಪನೆಯೇ ವಿಭಿನ್ನ. ಇಲ್ಲಿ ಗಂಡ– ಹೆಂಡತಿ ಇಬ್ಬರೂ ದುಡಿಯಬೇಕು. ಹಾಗಿದ್ದಾಗ ವಯಸ್ಸಾದ ಅಪ್ಪ– ಅಮ್ಮನನ್ನು ನೋಡಿಕೊಳ್ಳುವವರು ಯಾರು? ಅದಕ್ಕೆಂದೇ ವೃದ್ಧಾಶ್ರಮಕ್ಕೆ ಸೇರಿಸಿ, ಒಂದಿಷ್ಟು ಹಣ ಕೊಟ್ಟರೆ ಸಾಕು; ವೃದ್ಧಾಶ್ರಮದವರು ಅಪ್ಪ–ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಮಕ್ಕಳು ಬೇಕಿದ್ದರೆ ವಾರಕ್ಕೊಮ್ಮೆಯೋ, ತಿಂಗಳಿಗೊಮ್ಮೆಯೋ ಹೋಗಿ ನೋಡಿ ಬಂದರಾಯಿತು.

ನಿವೃತ್ತಿ ಆಗುವವರೆಗೆ ಅಥವಾ ಕೈಕಾಲಿನ ಶಕ್ತಿ ಉಡುಗಿಹೋಗುವವರೆಗೆ ದುಡಿದು, ವಯಸ್ಸಾದ ಮೇಲೆ ಜೀವಿಸಲು ಕೇವಲ ಹಣವಿದ್ದರೆ ಸಾಕೆ? ಮಕ್ಕಳು– ಮೊಮ್ಮಕ್ಕಳ ಪ್ರೀತಿ, ವಿಶ್ವಾಸ ಬೇಡವೆ? ಬೇಕು ಅನ್ನುವುದೇನೋ ನಿಜ; ಆದರೆ ಅದಕ್ಕೆ ಮಕ್ಕಳಿಗೆ ಪುರುಸೊತ್ತೆಲ್ಲಿದೆ? ಇಬ್ಬರೂ ದುಡಿಯಲು ಹೊರಗೆ ಹೋಗಲೇಬೇಕು. ವಯಸ್ಸಾದವರನ್ನು ನೋಡಿಕೊಂಡು ಮನೆಯಲ್ಲೇ ಕುಳಿತರೆ ಹೊಟ್ಟೆ ತುಂಬುತ್ತದೆಯೆ? ಜೀವನ ಸಾಗುತ್ತದೆಯೆ? ಮೊಮ್ಮಕ್ಕಳನ್ನು ಆಡಿಸಿಕೊಂಡು ಇರಲು ಆ ಮೊಮ್ಮಕ್ಕಳಿಗಾದರೂ ಸಮಯ ಬೇಡವೆ? ಮೂರನೇ ವಯಸ್ಸಿಗೇ ಬೇಬಿ ಸಿಟ್ಟಿಂಗ್‌ಗೆ ಕಳಿಸಬೇಕು. ಅಲ್ಲಿಂದ ಎಲ್‌ಕೆಜಿ, ಯುಕೆಜಿ. ಆ ಬಳಿಕ ಶಾಲೆಯ ಗಡಿಬಿಡಿ; ಮನೆಗೆ ಬಂದರೆ ಹೋಮ್‌ವರ್ಕ್, ಟ್ಯೂಷನ್ನು. ದುಡಿಯುವ ಗಾಣದೆತ್ತುಗಳಾಗಿರುವ ನಾವು ಎತ್ತ ಸಾಗುತ್ತಿದ್ದೇವೆ? ನಮ್ಮ ಕುಟುಂಬ ವ್ಯವಸ್ಥೆ ಎತ್ತ ಹೋಗುತ್ತಿದೆ? ಪ್ರೀತಿ, ವಿಶ್ವಾಸ, ಅಭಿಮಾನ, ಆರೈಕೆಗಳೆಲ್ಲವನ್ನೂ ಹಣದ ಮಾನದಂಡದಲ್ಲೇ ಅಳೆಯಲು ಸಾಧ್ಯವೆ?

ಸ್ವಯಂಸೇವಾ ಸಂಸ್ಥೆಗಳು ನಡೆಸಿರುವ ಸಮೀಕ್ಷಾ ವರದಿಗಳು ದೇಶದೆಲ್ಲೆಡೆ ವೃದ್ಧರು ಅನುಭವಿಸುತ್ತಿರುವ ಕಷ್ಟ ಕೋಟಲೆಗಳನ್ನು ಬಿಚ್ಚಿಟ್ಟಿವೆ. ದೇಶದಲ್ಲಿ ಶೇಕಡಾ 22ರಷ್ಟು ಮನೆಗಳಲ್ಲಿ ವಯಸ್ಸಾದ ಹಿರಿಯರ ಮೇಲೆ ದೊಡ್ಡ ಮಟ್ಟದ ದೌರ್ಜನ್ಯಗಳು ನಡೆಯುತ್ತಿವೆ. ಶೇಕಡಾ 50.7 ರಷ್ಟು ಮನೆಗಳಲ್ಲಿ ಸಣ್ಣ ಮಟ್ಟದ ದೌರ್ಜನ್ಯಗಳು ನಡೆಯುತ್ತಿವೆ. ಬಹುತೇಕ ಮನೆಗಳಲ್ಲಿ ಹಿರಿಯರು ಊಟ–ತಿಂಡಿ, ವಸತಿಗೆ ಮಕ್ಕಳನ್ನೇ ಅವಲಂಬಿಸಿರಬೇಕು. 1960ರಲ್ಲಿ ಭಾರತೀಯನೊಬ್ಬನ ಸರಾಸರಿ ಆಯುಷ್ಯ 40 ಆಗಿತ್ತು. ಈಗ 2015ರಲ್ಲಿ ಸರಾಸರಿ ಆಯುಷ್ಯ 68.3ಕ್ಕೆ ಏರಿದೆ. ಅಂದರೆ ವೃದ್ಧರ ಸಂಖ್ಯೆಯೂ ಏರುತ್ತಿದೆ. ಆದರೆ ಅದಕ್ಕೆ ಪೂರಕವಾಗಿ ಅವರಿಗೆ ಸೂಕ್ತ ಸೌಲಭ್ಯಗಳು ಸಿಗುತ್ತಿವೆಯೆ?

ಸರಕಾರಗಳೇನೋ ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ, ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ಮಾಸಾಶನ, ಪ್ರಯಾಣ ದರದಲ್ಲಿ ರಿಯಾಯ್ತಿ, ಸಾರ್ವಜನಿಕ ವಾಹನದಲ್ಲಿ ಆಸನ ಕಾಯ್ದಿರಿಸುವಿಕೆ, ಬ್ಯಾಂಕ್ ಬಡ್ಡಿ ದರದಲ್ಲಿ ಹೆಚ್ಚಳ– ಹೀಗೆ ಹಲವು ಯೋಜನೆಗಳಿವೆ. ಆದರೆ ಸ್ವಂತ ಮನೆಯಲ್ಲೇ ಹಿರಿಯರಿಗೆ ಮಕ್ಕಳಿಂದ ಕಿರುಕುಳ, ನಿರ್ಲಕ್ಷ್ಯ, ಅವಮಾನಗಳು ನಡೆದರೆ ಸರ್ಕಾರಗಳಾದರೂ ಏನು ಮಾಡಲಾದೀತು? ಮಕ್ಕಳ ಮೇಲೆಯೇ ಪೊಲೀಸ್ ದೂರು ನೀಡಿ ಬದುಕು ಮುಂದುವರಿಸಲು ಸಾಧ್ಯವೆ? ಮನೆಯೊಳಗಿನ ಕಿರುಕುಳ, ದೌರ್ಜನ್ಯಗಳಿಗೆ ಪೊಲೀಸರಾದರೂ ಯಾವ ಮಟ್ಟದ ರಕ್ಷಣೆ ಒದಗಿಸಲು ಸಾಧ್ಯವಿದೆ? ಸಮೀಕ್ಷೆಯ ಪ್ರಕಾರ, ಶೇಕಡಾ 34.7ರಷ್ಟು ದೌರ್ಜನ್ಯ ಪ್ರಕರಣಗಳಲ್ಲಿ ಸೊಸೆಯರದ್ದೇ ಹೆಚ್ಚು ಕಿರುಕುಳ. ಹೆತ್ತವರಿಗೆ ಕಿರುಕುಳ ಕೊಡುವುದರಲ್ಲಿ ಗಂಡು ಮಕ್ಕಳೂ ಹಿಂದೆ ಬಿದ್ದಿಲ್ಲ; ಅವರ ಪಾಲು ಶೇಕಡಾ 23.8 ರಷ್ಟು. ಶೇಕಡಾ 7.5ರಷ್ಟು ಪ್ರಕರಣಗಳಲ್ಲಿ ಹೆಣ್ಣುಮಕ್ಕಳೇ ವೈರಿಗಳಾಗಿದ್ದರೆ, ಶೇಕಡಾ 9.1ರಷ್ಟು ಪ್ರಕರಣಗಳಲ್ಲಿ ಅಳಿಯನೇ ದುಷ್ಮನ್. ಹತ್ತಿರದ ಸಂಬಂಧಿಗಳಿಂದ ಕಿರುಕುಳ ಅನುಭವಿಸುತ್ತಿರುವ ವೃದ್ಧರ ಪ್ರಮಾಣ ಶೇಕಡಾ 10.5ರಷ್ಟಿದ್ದರೆ, ನೆರೆಹೊರೆಯವರಿಂದ ಕಿರುಕುಳ ಅನುಭವಿಸುತ್ತಿರುವವರ ಪ್ರಮಾಣ ಶೇಕಡಾ 4.7ರಷ್ಟು. ಒಟ್ಟಾರೆ ವಯಸ್ಸಾದವರೆಂದರೆ ಎಲ್ಲರಿಗೂ ನಿರ್ಲಕ್ಷ್ಯ, ತಾತ್ಸಾರ ಮತ್ತು ಕಡೆಗಣ್ಣೋಟ. ದೌರ್ಜನ್ಯಗಳಲ್ಲೂ ಅಸಭ್ಯವಾಗಿ ಬೈಯುವವರ ಪಾಲು ಶೇಕಡಾ 50.2ರಷ್ಟು.

ಹಿರಿಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶೇಕಡಾ 86ರಷ್ಟು ಉನ್ನತ ಆದಾಯ ಮತ್ತು ಮಧ್ಯಮ ಆದಾಯ ಹೊಂದಿರುವ ಕುಟುಂಬಗಳಿಂದಲೇ ವರದಿಯಾಗುತ್ತಿದೆ ಎನ್ನುವುದು ಏನನ್ನು ಸೂಚಿಸುತ್ತದೆ? ಇದ್ದ ಮಟ್ಟಿಗೆ ಬಡವರೇ ತಮ್ಮ ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಂದೆ? ಶ್ರೀಮಂತಿಕೆ ಬಂದಷ್ಟೂ, ಆದಾಯ ಹೆಚ್ಚಾದಷ್ಟೂ ನಮ್ಮ ಜನರ ಹೃದಯ ಶ್ರೀಮಂತಿಕೆ ಕಡಿಮೆ ಆಗುತ್ತಿದೆಯೆಂದೆ? ಸರ್ಕಾರ ದಂಡ ಹಿಡಿದುಕೊಂಡು ಪರಿಹರಿಸುವ ಸಮಸ್ಯೆ ಇದಲ್ಲ. ಆಧುನಿಕ ಜಗತ್ತು ಮತ್ತು ಸುಖ– ಸಂಪತ್ತಿನ ಹಪಾಹಪಿ ಹುಟ್ಟು ಹಾಕಿರುವ ಹೊಸ ವ್ಯಾಧಿಯಿದು. ಕುಟುಂಬ ವ್ಯವಸ್ಥೆಯೊಳಗೇ ಈ ವ್ಯಾಧಿಗೆ ಮದ್ದು ಹುಡುಕಬೇಕಿದೆ.

■ ಬಿ.ಎಂ.ಹನೀಫ್